ಮತ್ತೆ ಆರಂಭಿಸಬೇಕಾಗಿದೆ ಎಂದು ಹೇಳಿದರು. ಅನಾರೋಗ್ಯದ ಕಾರಣವಾಗಿ ಸೋನಕ್ಕ ಬರಲಾಗಲಿಲ್ಲ, ಅವರ ಕುಟುಂಬದ ಎಲ್ಲರೂ ಬಂದಿದ್ದರು. ಅಂದಿನದು ಧಾರವಾಡ ಕಂಡ ಅದ್ಭುತ ಕಾರ್ಯಕ್ರಮವಾಗಿತ್ತು. ಮರುದಿನ ಎಸ್.ಆರ್. ಹಿರೇಮಠ, ರಾಚಪ್ಪ ಬೆಟಸೂರ, ಹಡಪದ, ವಿಷ್ಣುಮೂರ್ತಿ ದಂಪತಿ, ಎಸ್.ಸಿ. ಹಿರೇಮಠ, ಬಿ.ಎಸ್. ಮಂಜುನಾಥ್ ಮುಂತಾದ ಎಲ್ಲರೂ ನಮ್ಮ ಮನೆಯಲ್ಲಿ ಸೇರಿದ್ದೆವು. ರಾಯ್ ತಮ್ಮ ಅನುಭವಗಳನ್ನು ಮತ್ತೆ ಹಂಚಿಕೊಂಡರು. ಆಗಸ್ಟ್ 31ರ ಬೆಳಗ್ಗೆ ಕವಿವಿಯ ಕಾನೂನು ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಥಳೀಯ ನ್ಯಾಯವಾದಿಗಳು, ಕಾನೂನು ವಿದ್ಯಾರ್ಥಿಗಳು ರಾಯ್ ಅವರ ಜೊತೆ ನಡೆಸಿದ ಚರ್ಚೆ ವಿಶಿಷ್ಟವಾಗಿತ್ತು. ಡಿಸೆಂಬರ್ ಕೊನೆಯ ವಾರದಲ್ಲಿ ಮೈಸೂರಿಗೆ ಬರುತ್ತೇನೆ, 8–10 ದಿನ ಉಳಿಯುತ್ತೇನೆ, ನಾಡಿನ ಭ್ರಷ್ಟ ವ್ಯವಸ್ಥೆಯ ವಿರುದ್ಧ, ಜೆಪಿ ಮಾದರಿಯ ಹೋರಾಟವನ್ನು ಅಲ್ಲಿಂದಲೇ ಆರಂಭಿಸೋಣ ಎಂದು ಘೋಷಿಸಿದರು. ಅದೇ ದಿನ ಸಂಜೆಯ ಟ್ರೇನ್ ಹಿಡಿದು ದಿಲ್ಲಿಗೆ ತೆರಳಿದರು.

9

ಕುವೆಂಪು, ಬೇಂದ್ರೆ, ಗೋಪಾಲಕೃಷ್ಣ ಅಡಿಗ, ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಚಂಪಾ ಮುಂತಾದವರ ಬರವಣಿಗೆಯನ್ನು ಮೆಚ್ಚುತ್ತಿದ್ದ ಗೌಡರಂಥವರ ಸಂಪರ್ಕವೇ ನಮ್ಮ ಭಾಗ್ಯ ಅನಿಸಿತ್ತು. ಗೋಪಾಲಗೌಡರು ಸ್ವತಃ ಕವಿಯಾಗಿದ್ದರು. 'ಗಿರಿಧಾರಿ' ಎಂಬ ಕಾವ್ಯನಾಮದಿಂದ ಬರೆಯುತ್ತಿದ್ದರು; ಹೀಗೆ ಬರೆದ ಒಂದು ಕವಿತೆ ಸಿಕ್ಕಿದೆ. ಶಾರ್ವರಿ ಸಂವತ್ಸರವನ್ನು ಬರಮಾಡಿಕೊಳ್ಳುವ, ನವಯುಗವನ್ನು, ನವಮನ್ವಂತರವನ್ನು ಸ್ವಾಗತಿಸುವ ಸಂದರ್ಭದಲ್ಲಿಯೂ ಗೌಡರು ತಮ್ಮ ಮನಃಸ್ಥಿತಿ ಮತ್ತು ಮನೆಸ್ಥಿತಿಯ ವ್ಯಾಕುಲತೆ, ಹಾಗೂ ಪರೋಕ್ಷವಾಗಿ ಜನಪರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ:

**ಕಾಲಾಯ ತಸ್ಮೈ ನಮಃ**

ಬಂದೆ ಬಿಟ್ಟನೆ ಶಾರ್ವರಿ
ಬಡವನ ಈ ಬಾಗಿಲಿಗು,
ಬಂದಂತೆ ಹಿಂದೆ ರಾಯಭಾರಿ ವಿದುರನ ಮನೆಗೆ.
ಹೇಗೆ ಇದಿರುಗೊಳ್ಳಲಿ?
ಎಂತು ಸತ್ಕರಿಸಲೀ ಕಾಲಪುರುಷನ?
ಇಲ್ಲ ಮನೆಯೊಳಗೊಂದಿನಿತು ಅವಲಕ್ಕಿ ಕೂಡ
ವಂಚಿಸಿದೆ, ತಂದೆ ತಾಯಿ ಮಡದಿ ಮಕ್ಕಳ
'ನಾಳೆ ತರುವೆ', 'ನಾಳೆ ಕೊಡುವೆ' ಎಂದು.
ಬರಲಿಲ್ಲ ಆ ನಾಳೆ, ನನ್ನನೇ ವಂಚಿಸಿಕೊಂಡೆ
ನೆಮ್ಮಿ ಎಂದೂ ಬರದ ಆ ನಂಬುಗೆಯ
ನಾಳೆಯನು.
ವಂಚಿಸಲಾರೆ ಇವನ, ಈ ಕಳ್ಳ ಕಾಲನ.
ಅವಗೆ ಗೊತ್ತಿರುವುದನೆ, ಹೇಳಿಕೊಳ್ಳುವೆ ಮತ್ತೆ
ಆದೀತು ನನ್ನ ಈ ಎದೆಭಾರ ಹಗುರ.
ಎಷ್ಟಾದರೂ ಜಗಕೆ ಮಿತ್ರನಲ್ಲವೆ ಅವನು?
ಬೇಗನೇ ಉಣಬಡಿಸಿ ಆಡುವೆನು ಬೆಲ್ಲದ ಮಾತ.
ಶಾರ್ವರಿ, ಇಗೋ ಇತ್ತ ನಿನಗೆ ಸ್ವಾಗತ!

'ಗಿರಿಧಾರಿ' ನಾಮದಿಂದ ಬರೆದ ಅವರ ಬೇರೆ ಕವಿತೆಗಳನ್ನು ಆ ಕಾಲದ ಪತ್ರಿಕೆಗಳಿಂದ ಹುಡುಕಿ ಸಂಕಲಿಸುವ ಕೆಲಸ ನಡೆಯಬೇಕು. ಅಥವಾ ಅಲ್ಲಲ್ಲಿ, ತಮ್ಮ ಸ್ನೇಹಿತರು, ಬೇರೆ ಬೇರೆ ಊರುಗಳಲ್ಲಿಯ ಸಮಾಜವಾದಿ ಸಂಗಾತಿಗಳ ಮನೆಗಳಲ್ಲಿ ತಂಗಿದಾಗ, ಗೌಡರು ಬರೆದು, ಅಲ್ಲಿಯೇ ಬಿಟ್ಟಿದ್ದ ಬಿಡಿ ಕಾಗದಗಳಲ್ಲಿಯೂ ಇಂಥ ಕವಿತೆ, ಇತರ ಬರವಣಿಗೆಗಳು ಇದ್ದಿರಬಹುದು. ಗೌಡರು ಪ್ರಕಟಣೆ, ಪ್ರಚಾರದ ಆಸೆಯನ್ನೇ ಹೊಂದಿರಲಿಲ್ಲ. ಗೋಪಾಲಗೌಡರು ಬರೆದ ಕೆಲವು ಪುಟ್ಟ ಟಿಪ್ಪಣಿಗಳು, ಕೆಲವು ವಸ್ತುಗಳನ್ನು ಕೊಂಡಿದ್ದ ವಿವರ ಇತ್ಯಾದಿ ಬರೆದಿದ್ದ ಒಂದು ಪುಟ್ಟ ಡೈರಿ ಈಚೆಗೆ ನನಗೆ ಸಿಕ್ಕಿದೆ.

ಗೋಪಾಲಗೌಡರು ರಾಜಕೀಯದಿಂದ ದೂರವಿದ್ದು ಅಥವಾ ಬಿಡುಗಡೆ ಹೊಂದಿ ಸಾಹಿತ್ಯ ರಚನೆ ಮಾಡಿದ್ದರೆ ಖ್ಯಾತ ಲೇಖಕರಾಗುತ್ತಿದ್ದರು. ರಾಜಕೀಯ ಜೀವನ, ಹೋರಾಟ, ಕ್ರಾಂತಿಯ ಸಂಪರ್ಕಗಳು ಅವರ ಪ್ರತಿಭೆಯನ್ನು ಬಳಸಿಕೊಂಡವು. ಜವಾಹರಲಾಲ್ ನೆಹರೂ, ರಾಮಮನೋಹರ್ ಲೋಹಿಯಾ, ಶಾಂತವೇರಿ ಗೋಪಾಲಗೌಡರಂಥವರು ರಾಜಕೀಯಕ್ಕೆ ತಪ್ಪಿ ಬಂದಿದ್ದರು ಅನಿಸುತ್ತದೆ; ಅವರ ಪ್ರವೇಶದಿಂದ ರಾಜಕೀಯಕ್ಕೆ ಬೆಲೆ ಬಂತು, ಆದರೆ ದೇಶ, ಭಾಷೆ, ಸಾಹಿತ್ಯ, ಸಂಸ್ಕೃತಿಗಳು ಬಹಳಷ್ಟು ಕಳೆದುಕೊಂಡುವು.●